ಶ್ರೀ ಎಸ್. ಎ. ವಾಸನ್ನ ಶೆಟ್ಟಿ.—ಉತ್ತರದಲ್ಲಿ ಎನ್ನೂರಿನಿಂದ ದೊಡ್ಡಕುಂದೂರಿಗೆ ಹೋಗುವ ರಸ್ತೆಗಳನ್ನು ಆರ್. ಸಿ. ರಸ್ತೆಗಳಾಗಿ ತೆಗೆದುಕೊಂಡಿದ್ದೀರಾ ಎಂದು ಇರಬೇಕಾಗಿತ್ತು. ಇಲ್ಲಿ ಕೊಟ್ಟಿರುವ ರಸ್ತೆ ಹೆಸರು ತಪ್ಪಾಗಿರಬಹುದು.

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಸದಸ್ಯರು ಹೇಳುವಂತೆ ಎನ್ನೂರಿನಿಂದ ದೊಡ್ಡ ಕುಂದೂರಿಗೆ ಹೋಗುವ ರಸ್ತೆಯನ್ನೇ ತೆಗೆದುಕೊಂಡು ಅಂದಾಜು ಮಾಡಲಾಗಿದೆ.

ಶ್ರೀ ಎಸ್. ಎ. ವಾಸನ್ನ ಶೆಟ್ಟಿ.—ಇದರ ಅಂದಾಜು ಯಾವಾಗ ಮಂಜೂರಾಗಿದೆ ಮತ್ತು ಅದರಲ್ಲಿ ಎಷ್ಟು ಕೆಲಸಗಳಾಗಿವೆ ?

ಶ್ರೀ ಜಿ. ಬಿ. ಶಂಕರರಾವ್.—ಅಂದಾಜು ಮಂಜೂರಾಗಿದೆ. 21,780 ರೂಪಾಯಿಗಳಷ್ಟು ಹಣ ಸಹ ಒದಗಿಸಿದ್ದು ಈ ರಸ್ತೆ ಕೆಲಸ ಈಗ ಪೂರ್ತಿಯಾಗಿ ಆಗಿದೆ.

Loans Granted to Service Co-operative and Farming Societies.

*Q.—116. Sri ANDANAIAH (Kunigal).—

Will the Government be pleased to state:—

(*a*) the amount of Short Term, Middle Term and Produce loan granted to service co-operative and farming societies of Gottigere and Muganapura in Huthridurga Hobli and Kuppee of Amruthur Hobli in Kunigal Taluk so far ;

(*b*) the amount recovered so far from the said societies ;

(*c*) the amount misappropriated in the above societies ;

(*d*) the action they have taken against such societies who have misappropriated the amount ?

A.—(*a*) Sri K. PUTTASWAMY (Minister for Co-operation and Housing).—

Name of the Society	S.T.L.	M.T. Loan	Produce loan
Gottigere S.C.S. ...	23,300	4,400	1,474 83
Muganapura S.C.S. ...	19,800	10,100	65 19
Kuppe S.C.S. ...	13,100	28,350	5,668 19
Gottigere J.F.C.S. ...	...	4,000	Godown-*cum*-cattle shed loan 3,750 00
Muganapura J.F.C.S.	...	4,000	3,750 00
(*b*) —			
Gottigere S.C.S. ...	1,650	45	Produce loan 1,474 83
Muganapura S.C.S. ...	1,010	100	Nil
Kuppe S.C.S. ...	400	9,818	6,308 22
Gottigere Joint F.C.S.	...	266 67	Godown-*cum*-cattle shed loan 250 00
(*c*) —			
Gottigere S.C.S ...	...	4,236 52	

(*d*) Necessary complaint has been lodged with the police.

ಶ್ರೀ ಅಂದಾನಯ್ಯ.— (ಸಿ) ಗೆ ಉತ್ತರವಾಗಿ ಇಲ್ಲ 4236 ರೂಪಾಯಿಗಳಷ್ಟು ಹಣ ದುರುಪಯೋಗವಾಗಿದೆ ಎಂದು ಹೇಳಿದ್ದೀರಿ. ಆದರೆ ಈ ಗೊಟ್ಟಗೆರೆ ಸಹಕಾರ ಸಂಘದಲ್ಲಿ 8,000 ರೂಪಾಯಿಗಳಷ್ಟು ಕ್ಯಾಷ್ ಬ್ಯಾಲೆನ್ಸ್ ಕೂಡ ಇದ್ದುದು ದುರುಪಯೋಗವಾಗಿದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿಲ್ಲವೆ ?

ಶ್ರೀ ಕೆ. ಪುಟ್ಟಸ್ವಾಮಿ.—ಗೊಟ್ಟಗೆರೆ ಸಹಕಾರ ಸಂಘದಲ್ಲಿ 7126 ರೂಪಾಯಿ 40 ನಯಾ ಪೈಸಾ ಬರಬೇಕಾಗಿದ್ದುದರಲ್ಲಿ ರೂ. 6328-22 ನಯಾಪೈಸಾ ರಿಕವರ್ ಆಗಿದೆ. ಇನ್ನೂ ರೂ. 798-18 ನಯಾಪೈಸಾ ಬರಬೇಕಾಗಿದೆ. ಇದನ್ನು ವಸೂಲು ಮಾಡಲು ತಕ್ಕ ಕ್ರಮಗಳನ್ನು ತೆಗೆದುಕೊಳ್ಳ ರಾಗಿದೆ.

ಶ್ರೀ ಅಂದಾನಯ್ಯ.—ಏಳು ಸಾವಿರ ಚಿಲ್ಲರೆಯಷ್ಟು ಹಣ ದುರುಪಯೋಗವಾಗಿರುವುದು ಯಾವ ಸಾಲಿನಲ್ಲಿ ?

ಶ್ರೀ ಕೆ. ಪುಟ್ಟಸ್ವಾಮಿ.—1964-65ನೇ ಸಾಲಿನಲ್ಲಿ.

ಶ್ರೀ ಅಂದಾನಯ್ಯ.—ಮೂಗನಪುರ ಸೇವಾ ಸಹಕಾರ ಸಂಘದಲ್ಲಿ ಇಷ್ಟು ಹಣ ದುರುಪಯೋಗ ವಾಗಿದೆ ಎಂದು ಅಲ್ಲಿಯ ಜನಗಳಿಂದ ಸರಕಾರಕ್ಕೆ ದೂರುಗಳೇನಾದರೂ ಬಂದಿವೆಯೇ ? ಹಾಗೆ ಬಂದಿದ್ದರೆ ಸರಕಾರ ಅದರಮೇರೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಕೆ. ಪುಟ್ಟಸ್ವಾಮಿ.—ಮೂಗನಪುರ ಸೇವಾ ಸಹಕಾರ ಸಂಘದಲ್ಲಿ ಹಣ ದುರುಪಯೋಗ ವಾಗಿತ್ತು. ಇದರಲ್ಲಿ 11-11-1965ರಲ್ಲಿ 500 ರೂಪಾಯಿಗಳನ್ನು ಸರಕಾರಕ್ಕೆ ಕೊಟ್ಟಿದ್ದಾರೆ. 15-11-1965ರಲ್ಲಿ 450 ರೂಪಾಯಿಗಳಷ್ಟು ವಸೂಲಾಗಿದೆ. ಇನ್ನೂ ಪೋಲೀಸಿಗೆ ಕಂಪ್ಲೇಂಟ್ ಕೊಟ್ಟಿಲ್ಲ. ತನಿಖೆ ಮಾಡುತ್ತಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಕುಪ್ಪೆ ಸಹಕಾರ ಸಂಘದಲ್ಲಿ ಅಲ್ಲಿರುವ ಕಾರ್ಯದರ್ಶಿಗಳು, ಅಲ್ಲಿರುವ ಅಸಿಸ್ಟೆಂಟು ರಿಜಿಸ್ಟ್ರಾರ್‌ರವರು ಹಾಗೂ ಜಿಲ್ಲಾಭಿವೃದ್ಧಿ ಅಧ್ಯಕ್ಷರು ಇವರು ಮೂರು ಜನರೂ ಸೇರಿ ಕೊಂಡು ಒಕ್ಕೂಟಗಳನ್ನು ಮಾಡಿಕೊಂಡು ಸುಮಾರು ಎಂಟು ಸಾವಿರದಷ್ಟು ಹಣವನ್ನು ದುರುಪ ಯೋಗಪಡಿಸಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ಮತ್ತು ಈ ರೀತಿ ದುರ್ವ್ಯವಹಾರ ಮಾಡುತ್ತಿರುವ ಜನರಮೇಲೆ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಸರಕಾರದ ಗಮನಕ್ಕೆ ಬಂದಿಲ್ಲವೇ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಹೇಳುವ ವಿಚಾರ ಸರಿಯಾದುದಲ್ಲ.

ಶ್ರೀ ಕೆ. ಲಕ್ಕಪ್ಪ.—ಈ ಬಗ್ಗೆ ಅಸಿಸ್ಟೆಂಟ್ ರಿಜಿಸ್ಟ್ರಾರ್‌ಮೇಲೆ ಎಷ್ಟು ದೂರುಗಳು ಬಂದಿದ್ದುವು? ಅದರ ಬಗ್ಗೆ ಏನು ಕ್ರಮ ಕೈಕೊಂಡಿರಿ? ಅವರಿಗೆ ವರ್ಗವಾಗಿದ್ದರೂ ಕೂಡ ಅವರು ಹೋಗದೆ ತುಮಕೂರಿನಲ್ಲೇ ವಾಸಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

Mr. SPEAKER.—It is disallowed.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಕುಣಿಗಲ್ ತಾಲ್ಲೂಕಿನಲ್ಲಿ ಯಾವ ಯಾವ ಸಹಕಾರ ಸಂಘ ಗಳಲ್ಲಿ ಹಣ ದುರುಪಯೋಗವಾಗಿದೆ ಎಂದು ಆಡಿಟರನ್ನು ಕಳಿಸಿ ತಿಳಿದುಕೊಂಡು ಈ ಸಭೆಗೆ ತಿಳಿಸಲು ಸಾಧ್ಯವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಇದು ಒಟ್ಟು ತಾಲ್ಲೂಕಿಗೆ ಸಂಬಂಧಪಟ್ಟ ಪ್ರಶ್ನೆ ಎಲ್ಲಾ ಸಹಕಾರ ಸಂಘಗಳಲ್ಲೂ ಹಣ ದುರುಪಯೋಗವಾಗಿದೆ ಎಂಬ ಶಂಕೆ ಇರುವುದು ಸರಿಯಲ್ಲ. ಈ ಪ್ರಶ್ನೆಯಲ್ಲಿ ಕೇಳಿರುವ ಸಂಘಗಳ ವಿವರ ಈಗ ಕೊಡರಾಗಿದೆ.

ಶ್ರೀ ಕೆ. ಲಕ್ಕಪ್ಪ.—ಕುಣಿಗಲ್ ತಾಲ್ಲೂಕು ಸಹಕಾರ ಸಂಘಗಳ ಒಕ್ಕೂಟದಲ್ಲಿ ಹಿಂದಿದ್ದ ಅಸಿಸ್ಟೆಂಟ್ ರಿಜಿಸ್ಟ್ರಾರರು ಸೇರಿ ಹಣ ದುರುಪಯೋಗಮಾಡಿರುವುದರ ಬಗ್ಗೆ ದೂರು ಬಂದಿದೆಯೇ ? ಕ್ರಮ ಕೈಕೊಳ್ಳರಾಗಿದೆಯೇ ?

Mr. SPEAKER.—It is disallowed. I will give, the member a further chance to correct himself.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈ ರೀತಿ ದುರುಪಯೋಗವಾಗುವುದನ್ನು ತಪ್ಪಿಸಲು ಸರಕಾರ ಹಣ ಸದ್ವಿನಿಯೋಗ ಮಾಡುವವರಿಗೆ ಬಹುಮಾನ ಕೊಟ್ಟರೆ ಅನುಕೂಲವಾಗಬಹುದು. ಆದುದರಿಂದ ಇದನ್ನು ಯೋಚನೆಮಾಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಸಲಹೆ ಕೊಟ್ಟಿದ್ದಾರೆ, ಪರಿಶೀಲಿಸೋಣ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕುಪ್ಪೆ ಸೊಸೈಟಿಯಲ್ಲಿ 8 ಸಾವಿರ ರೂಪಾಯಿ ದುರುಪಯೋಗವಾಗಿದೆ ಎಂದು ಮಾನ್ಯ ಸದಸ್ಯರು ಪತ್ರ ಬರೆದಮೇಲೆ ಆಡಿಟರು ಹೋಗಿ ಆಡಿಟ್ ಮಾಡಿ ನಿಜಾಂಶವನ್ನು ಹೊರಗೆಡವಿದರೇ ?

ಶ್ರೀ ಕೆ. ಪುಟ್ಟಸ್ವಾಮಿ.—ಕೆಲವು ಸಹಕಾರ ಸಂಘಗಳಮೇಲೆ ಫಿರ್ಯಾದಿತ್ತು. ಆದರೆ ಯಾವ ಸದಸ್ಯರಿಂದ ಯಾವಾಗ ಪತ್ರ ಕಳಿಸಲಾಯ್ತು ಎಂಬ ವಿವರ ತಿಳಿಸಿದರೆ ಆದಷ್ಟು ಜಾಗ್ರತೆ ಸರಕಾರದವರು ನೂಕ್ತ ಕ್ರಮ ಕೈಕೊಳ್ಳುತ್ತಾರೆ.

ಶ್ರೀ ಕೆ. ಲಕ್ಕಪ್ಪ.—ಹಿಂದಿದ್ದ ಅಸಿಸ್ಟೆಂಟ್ ರಿಜಿಸ್ಟ್ರಾರರು ಕುಣಿಗಲ್ ತಾಲ್ಲೂಕು ಸಹಕಾರ ಸಂಘಗಳ ಒಕ್ಕೂಟದಲ್ಲಿ ಸೇರಿಕೊಂಡು ಹಣ ದುರುಪಯೋಗಮಾಡಿರುವರೆಂದು ದೂರು ಬಂದಿದೆಯೇ!

ಶ್ರೀ ಕೆ. ಪುಟ್ಟಸ್ವಾಮಿ.—ಯಾವ ಒಕ್ಕೂಟವೆಂಬುದು ತಿಳಿಯದು, ಅಂತೂ ಆ ಅಸಿಸ್ಟೆಂಟ ರಿಜಿಸ್ಟ್ರಾರರಮೇಲೆ ಫಿರ್ಯಾದು ಬಂದಿಲ್ಲವಾದರಿಂದ ಮತ್ತು ಅಲ್ಲಿಂದ ಅವರು ವರ್ಗವಾಗಿಲ್ಲದಿರುವುದರಿಂದ ಅದನ್ನು ವಿಚಾರ ಮಾಡುವ ಅಗತ್ಯ ಕಾಣಲಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಜನರರ್ ಬಾಡಿ ವಿಾಟಿಂಗಾಗಿ ದುರುಪಯೋಗವಾಗಿರುವುದು ಗೊತ್ತಾದರೂ ಕೂಡ ಅದನ್ನು ಮುಚ್ಚಿಡುವುದಕ್ಕೆ ಪ್ರಯತ್ನಮಾಡಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಬೇಲಿಯೇ ಎದ್ದು ಹೊಲ ಮೇದರೆ ಹೇಗೆ ?

National Rural Water Supply Scheme

*Q.—273. Sri G. A. THIMMAPPA GOWDA (Arkalgud).—

Will the Government be pleased to state:—

(*a*) the names of villages in respect of which estimates have been prepared for the supply of water under National Rural Water Supply Scheme in Arkalgud Taluk, Hassan District;

(*b*) whether the estimates for rural National Water Supply for Handrangi village in Arakalgud Taluk has been sanctioned ;

(*c*) whether this estimate has not been included in the list of schemes which have been sent to Centre for approval ?

A.—Sri R. M. PATIL (Minister for Development, Panchayati Raj and Municipal Administration).—

(*a*) Handrnagi
Ankanahalli
Ramanathapur

(*b*) No.

(*c*) It has been included.

ಶ್ರೀ ಜಿ. ಎ. ತಿಮ್ಮಪ್ಪಗೌಡ.—(ಸಿ) ಪ್ರಶ್ನೆಗೆ ಕನ್ನಡದಲ್ಲಿ 'ಇದನ್ನು ಸೇರಿಸಲಾಗಿದ್ದಿತು' ಎಂದು ಉತ್ತರ ಕೊಡಲಾಗಿದೆ. In English the reply is, "It has been included". What is the position at present ?

ಶ್ರೀ ಆರ್. ಎಂ. ಪಾಟೀಲ್.—ಪ್ಲಾನು ಮತ್ತು ಅಂದಾಜು ಕೇಂದ್ರಸರಕಾರಕ್ಕೆ 24-2-1966 ರಲ್ಲಿ ಕಳಿಸಿರುವ ಪಟ್ಟಿಯಲ್ಲಿ ಸೇರಿಸಲಾಗಿದೆ.

Sri G. A. THIMMAPPA GOWDA.—Except these 3 villages, have any other applications been received from other villages ?